ಸಿ ಮಿಸ್ **: 332/2012** ಆರ್ . ಡಬ್ಲ್ಯೂ-**3**

ಸಾಕ್ಷಿಯನ್ನು ದಿಃ **21.09.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀಸವಾಲುಃ ಎದುರುದಾರರ ಪರ ಶ್ರೀ ಎಎಲ್ ಎಸ್ ವಕೀಲರಿಂದಃ

ಈ ದಾವೆ ಸಲ್ಲಿಸಿರುವ ದೊಡ್ಡಮ್ಮ ರವರು ನನ್ನ ಗಂಡನ ಮೊದಲನೇ ಹೆಂಡತಿ ಎಂದರೆ ಸರಿಯಲ್ಲ. ನಾನು 2 ನೇ ಹೆಂಡತಿ ಎಂದರೆ ಸರಿಯಲ್ಲ. ನನ್ನ ಗಂಡನಿಗೂ ದೊಡ್ಡಮ್ಮ ರವರಿಗೂ ಕಾನೂನು ಬದ್ಧ ವಿವಾಹ ರದ್ದು ಆಗಿರುವುದಿಲ್ಲ ಎಂದರೆ ಸಾಕ್ಷಿ ಅವರಿಬ್ಬರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರರು ದೊಡ್ಡಮ್ಮ ಪುಟ್ಟಮಾದಯ್ಯ ರವರ ಜೊತೆ ಮದುವೆಯಾಗಿರುತ್ತಾರೆ. ಸದರಿ ಪುಟ್ಟಮಾದಯ್ಯರವರನ್ನು ನಾನು ನೋಡಿರುವುದಿಲ್ಲ ಅವರ ತಂದೆ ಹೆಸರು ನನಗೆ ಗೊತ್ತಿಲ್ಲ. ಸದರಿ ಪುಟ್ಟಮಾದಯ್ಯ ತೀರಿಕೊಂಡಿರುತ್ತಾರೆ. ತೀರಿ ಕೊಂಡು ಎಷ್ಟು ವರ್ಷ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಅವರ ಸಾವಿಗೆ ಹೋಗಿರುವುದಿಲ್ಲ. ಸದರಿ ಪುಟ್ಟಮಾದಯ್ಯ ಎಂಬ ವ್ಯಕ್ತಿ ಭೂಮಿ ಮೇಲೆ ಹುಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ದೊಡ್ಡಮ್ಮ ರವರ ಗಂಡ ನರಸಿಂಹರಾಜು ಎಂದರೆ ಸರಿಯಲ್ಲ. ನನಗೆ ಮೂರು ಜನ ಮಕ್ಕಳು. ದೊಡ್ಡಮ್ಮನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ದೊಡ್ಡಮ್ಮನಿಗೆ ಯಶಸಿನಿ ಯಶವಂತ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ನರಸಿಂಹರಾಜು ರವರೇ ಹೆಸರಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಮತ್ತು ದೊಡ್ಡಮ್ಮ ರವರ ಮಕ್ಕಳು ಇಬ್ಬರ ಮೈಯಲ್ಲಿ ಹರಿಯುವ ರಕ್ತ ಒಂದೇ ಎಂದರೆ ಸರಿಯಲ್ಲ. ದೊಡ್ಡಮ್ಮ ರವರಿಗೆ ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ನೀಡುವುದನ್ನು ತಪ್ಪಿಸಲು ನನ್ನ ಗಂಡ ಹೇಳಿದ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ**,** ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ**.)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ